Sri J. B. MALLARADHYA.—Is it not the duty of the Deputy Chairman to check up the books of the bookmakers and see that Government revenues are safeguarded ?

Sri T. MARIAPPA.—The Deputy Commissioner checks up the accounts, collects the tax and remits it to Government.

Compounding Fee collected from Kanakapura, Sathanur and Kaggalipura Forest Ranges.

*Q.—120. Sri M. LINGE GOWDA (Kanakapura).—

Will the Government be pleased to state :—

the amount collected in the Forest Circles of Kanakapura, Sathanur and Kaggalipur Forest Range from 1st January 1958 to 31st December 1958, under the following items :

(*i*) compounding fee for unauthorised grazing of goats in the forest area ;

(*ii*) compounding fee for transporting greenwood without licence ?

(Information may be furnished separately for each circle in respect of each item).

A.—Sri K. F. PATIL (Minister for Agriculture and Food).

		Rs. nP.
(*i*)	Kanakapura Range ...	6,467-00
	Sathanur Range ...	1,963-50
	Anekal Range (Kaggalipur) ...	1,040-00
(*ii*)	Kanakapura Range ...	1,106-00
	Sathanur Range ...	1,501-78
	Anekal Range ...	439-11

ಶ್ರೀ ಎಂ. ಲಿಂಗೇಗೌಡ.—ಕನಕಪುರ ರೇಂಜು ಸಾತನೂರು ರೇಂಜು, ಆನೇಕಲ್ ರೇಂಜುಗಳಲ್ಲಿ ವಸೂಲ್ಮಾಡಿದ ಮೊಬಲಗಿನಲ್ಲಿ ಒಂದಕ್ಕೊಂದಕ್ಕೆ ಇಷ್ಟೊಂದು ವ್ಯತ್ಯಾಸ ಬರಲು ಕಾರಣವೇನು ?

ಶ್ರೀ ಕೆ. ಎಫ್. ಪಾಟೀಲ್.—ಅಷ್ಟಷ್ಟು ವ್ಯತ್ಯಾಸ ಏಕೆ ಬಂತು ಎಂದು ಹೇಳುವುದು ಕಷ್ಟ. ಎಷ್ಟು ವಸೂಲಾಗಿದೆಯೋ ಅಷ್ಟು ಮೊಬಲಗನ್ನು ಉತ್ತರದಲ್ಲಿ ಸೂಚಿಸಿದೆ. ಕನಕಪುರ ರೇಂಜಿನಲ್ಲಿ ಹೆಚ್ಚು ಮೊಬಲಗು ವಸೂಲಾಗಿರಬೇಕು. ಅದಕ್ಕೋಸ್ಕರ ಆ ರೀತಿ ವ್ಯತ್ಯಾಸವಿದೆ.

ಶ್ರೀ ಎಂ. ಲಿಂಗೇಗೌಡ.—ಅನಧಿಕೃತವಾಗಿ ಆಡುಗಳನ್ನು ಅರಣ್ಯಪ್ರದೇಶದಲ್ಲಿ ಮೇಯಿಸುವುದಕ್ಕಾಗಿ ಒಂದೊಂದು ಜಾಗದಲ್ಲಿ ಒಂದು ಒಂದೂವರೆ ರೂಪಾಯಿಯಂತೆ ವಸೂಲು ಮಾಡಿರುವ ಪೂರ್ತಿ ಮೊಬಲಗಷ್ಟೂ ಚೈಜರಿಗೆ ಕ್ರೆಡಿಟ್ ಆಗಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಆ ಸಂಬಂಧದಲ್ಲಿ ಮಾನ್ಯ ಸದಸ್ಯರು ಕೆಲವು ದೂರುಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಅವರಿಗೆ ಉತ್ತರಗಳನ್ನು ಕಳುಹಿಸುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ಅನುಮತಿಯಿಲ್ಲದೆ ಹಸಿಕಟ್ಟಿಗೆಯನ್ನು ಸಾಗಿಸುವುದಕ್ಕೆ ಕಾಂಪೌಂಡಿಂಗ್ ಫೀಜು ಹಾಕಿದ್ದೀರಿ. ಆ ರೀತಿ ಫೈನ್ ಹಾಕುವುದಕ್ಕೆ ಸೌದೆ ಗೋಸ್ಕರ ಲೈಸೆನ್ಸ್ ಇಲಾಖೆಯಿಂದ ಕೊಡದೇ ಇರುವುದೂ ಕೂಡ ಒಂದು ಕಾರಣವಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಲೈಸೆನ್ಸ್ ಕೊಡದೆ ಇದ್ದುದೂ ಒಂದು ಕಾರಣ. ಅವರೇ ಅನುಮತಿಯೆಲ್ಲದೆಯೇ ಹಸಿಕಟ್ಟಿಗೆ ಸಾಗಿಸಿದ್ದೂ ಒಂದು ಕಾರಣ. ಲೈಸೆನ್ಸ್ ಕೊಡದೇ ಇರುವುದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಲಿಂಗೇಗೌಡ.—ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ಹಸಿ ಸೌದೆಮರಗಳನ್ನು ಕಡಿಯಲು ಅನುಮತಿ ಕೊಡದಿದ್ದರೂ ಅನಧಿಕೃತವಾಗಿ ಅವುಗಳನ್ನು ಕಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಹಸಿಕಟ್ಟಿಗೆಯನ್ನು ಅನುಮತಿಯಿಲ್ಲದೆ ಸಾಗಿಸಬಾರದು ಎಂದು ಸೂಚನೆಯನ್ನು ಕೊಟ್ಟಿದೆ. ಏಕೆಂದರೆ ಹಸಿಗಿಡಗಳು ಪೂರಾ ನಾಶವಾಗುತ್ತವೆ. ಅದಕ್ಕೋಸ್ಕರ ತಡೆದಿದ್ದೇವೆ.

Quantity of Paddy purchased and sold during 1957-58 and 1958-59.

*Q.—123. Sri H. S. RUDRAPPA (Honnali).—

Will the Government be pleased to state :—

(*a*) the quantity of paddy acquired by the Government during the year 1957-58 together with the rate at which it was purchased,

(*b*) out of it, the quantity sold to the public ;

(*c*) the quantity of paddy or rice that may be acquired by the Government during the year 1958-59 according to the Mysore Rice Procurement Order, 1959 and the quantity so far acquired ;

(*d*) whether representations have been made to the Government that the Mysore Rice Procurement Order is defective and causes great hardship and harassment to the ryots and the dealers ;

(*e*) whether they intend to modify the above order ?